31	Shimoga – Tadasa on NH-4 via Savalanga via Shikaripura-Shiralakoppa – Togarsi – Anvatti – Gondi – Hangal	171
32	Jamkhandi – Maharastra Border via Teradal – Kudachi – Managasuli	79
33	Horanadu – Subramanaya via Kalasa – Kottigehara – Mudigere – Sakalehpura Junction – Vanagur	164
34	Molkalmur to SH 19 (KSHIP 1 Road)	6
35	Bidar – Chincholi via Ekhelli (NH9)	61
36	Padubidri – Karkala	28
37	Kollegala – Tamilnadu Boarder via Hanur – MM Hills	97
38	Virajpet – Somawarpet via Madikere	71
Total Length (Kms)		**3,411**

<u>ಕರ್ನಾಟಕ ವಿಧಾನ ಸಭೆ</u>

576 ಶ್ರೀ ಜಯಚಂದ್ರ ಟಿ.ಬಿ.

ಪ್ರವಾಸೋದ್ಯಮ ಮತ್ತುಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಪ್ರವಾಸೋದ್ಯಮ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳು.

ಅ) ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಇಲಾಖೆಯಲ್ಲಿ ಹಾಲಿ ಚಾಲ್ತಿಯಲ್ಲಿರುವ ವಿವಿಧ ಯೋಜನೆಗಳು ಯಾವುವು; ಆ ಯೋಜನೆಗಳಿಗೆ ಕಾಯ್ದಿರಿಸಿದ ಅನುದಾನವೆಷ್ಟು; ಈ ಯೋಜನೆಗಳಿಂದ ಕೈಗೊಂಡ ಕಾಮಗಾರಿಗಳು ಯಾವುವು ಹಾಗೂ ಅವುಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು;(ಜಿಲ್ಲಾವಾರು ವಿವರ ನೀಡುವುದು);

ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಅಂಗವಾಗಿ ಹಮ್ಮಿಕೊಳ್ಳುತ್ತಿರುವ ಯೋಜನೆಗಳ ಪೈಕಿ ಈ ಕೆಳಕಂಡ ಕಾಮಗಾರಿಗಳ ಚಾಲ್ತಿಯಲ್ಲಿವೆ.

01. ಪ್ರವಾಸಿ ತಾಣಗಳಲ್ಲಿ ವಸತಿ ಸೌಕರ್ಯ ನಿರ್ಮಾಣ.
02. ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯಗಳ ನಿರ್ಮಾಣ.
03. ಸ್ಮಾರಕಗಳಿಗೆ ಹೊನಲು ಬೆಳಕು.
04. ಧ್ವನಿ ಮತ್ತು ಬೆಳಕಿನ ಯೋಜನೆ.
05. ಪರಿಸರ ಪ್ರವಾಸೋದ್ಯಮ ಯೋಜನೆಗಳು.
06. ಪ್ರವಾಸಿ ತಾಣಗಳಿಗೆ ಸೇರುವ ಕೂಡುರಸ್ತೆಗಳ ಅಭಿವೃದ್ಧಿ.
07. ರಾಜ್ಯದಲ್ಲಿರುವ ಪ್ರಮುಖ ಪ್ರವಾಸಿ ತಾಣಗಳ ಬಳಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಪ್ರಚಾರ.

ಇವುಗಳ ಅನುಷ್ಠಾನಕ್ಕಾಗಿ 2009–10ನೇ ಸಾಲಿನಲ್ಲಿ ಒದಗಿಸಲಾಗಿರುವ ಒಟ್ಟು ಅನುದಾನ ರೂ. 172.80 ಕೋಟಿಗಳು.

ಮೇಲಿನ ಅನುದಾನವನ್ನು ಈ ಕೆಳಗೆ ಕಾಣಿಸಿದ ಜಿಲ್ಲೆಗಳಲ್ಲಿ ವಿವಿಧ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿ ವಿವಿಧ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

(ರೂ.ಲಕ್ಷಗಳಲ್ಲಿ)

1.	ಹಾಸನ	938.92
2.	ತುಮಕೂರು	81.37
3.	ಚಿಕ್ಕಮಗಳೂರು	185.00
4.	ಹಾವೇರಿ	25.00
5.	ಮೈಸೂರು	130.00
6.	ಗದಗ	70.00
7.	ಚಿತ್ರದುರ್ಗ	134.78
8.	ಬೆಂಗಳೂರು	160.00
9.	ಮಂಡ್ಯ	132.89
10.	ಶಿವಮೊಗ್ಗ	369.42
11.	ದಾವಣಗೆರೆ	150.00
12.	ರಾಮನಗರ	100.00
13.	ಬಿಜಾಪುರ	25.00
14.	ಬೀದರ್	3133.00
15.	ಚಿಕ್ಕಬಳ್ಳಾಪುರ	30.00
16.	ದಕ್ಷಿಣ ಕನ್ನಡ	116.00
17.	ಬಳ್ಳಾರಿ	486.64
18.	ಚಾಮರಾಜನಗರ	100.30
19.	ಉತ್ತರ ಕನ್ನಡ	170.00
20.	ಉಡುಪಿ	142.42
21.	ಕೊಪ್ಪಳ	25.00
22.	ಕೊಡಗು	46.26
23.	ಧಾರವಾಡ	128.29
24.	ಗುಲ್ಬರ್ಗಾ	90.00

ಪ್ರವಾಸಿ ತಾಣಗಳಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯಗಳ ನಿರ್ಮಾಣಕ್ಕಾಗಿ ಕಾಯ್ದಿರಿಸಿರುವ ರೂ.200.00ಲಕ್ಷಗಳ ಪೈಕಿ ರೂ.123.29ಲಕ್ಷಗಳನ್ನು

ಮುಂದುವರಿದ ಕಾಮಗಾರಿಗಳಿಗೂ ಉಳಿದ ರೂ.72.50ಲಕ್ಷಗಳನ್ನು ಹೊಸ ಕಾಮಗಾರಿಗಳಿಗೆ ವಿನಿಯೋಗಿಸಲಾಗುತ್ತಿದೆ.

ಪ್ರವಾಸಿ ಕೂಡುರಸ್ತೆಗಳ ಅಭಿವೃದ್ಧಿಗಾಗಿ ಒದಗಿಸಿರುವ ರೂ.1500.00ಲಕ್ಷಗಳನ್ನು 11 ಕೂಡುರಸ್ತೆಗಳ ಅಭಿವೃದ್ಧಿಗಾಗಿ ವಿನಿಯೋಗಿಸಲಾಗುತ್ತಿದೆ.

ಪರಿಶಿಷ್ಟ ಜಾತಿ ವಿಶೇಷ ಯೋಜನೆ ಅಡಿ ಒದಗಿಸಿರುವ ರೂ.1609.16ಲಕ್ಷ ಮತ್ತು ಗಿರಿಜನ ಉಪಯೋಜನೆ ಅಡಿ ಒದಗಿಸಿರುವ ರೂ.644.29ಲಕ್ಷಗಳನ್ನು ಒದಗಿಸಿದ್ದು ಈ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗಾಗಿ ವಿನಿಯೋಗಿಸಲಾಗುವುದು.

ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ.2000.00ಲಕ್ಷಗಳನ್ನು ಒದಗಿಸಿದ್ದು ಈ ಅನುದಾನವನ್ನು ಹಿಂದುಳಿದ ತಾಲ್ಲೂಕುಗಳಲ್ಲಿ ಇರುವ ಪ್ರಮುಖ ಪ್ರವಾಸಿ ತಾಣಗಳ ಅಭಿವೃದ್ಧಿಗೆ ವಿನಿಯೋಗಿಸಲಾಗುವುದು. ಪ್ರಚಾರ ಕಾರ್ಯಕ್ಕೆ ಒದಗಿಸಿರುವ ರೂ.1079.00ಲಕ್ಷಗಳನ್ನು ಪ್ರಚಾರ ಕಾರ್ಯಕ್ಕೆ ವಿನಿಯೋಗಿಸಲಾಗುವುದು.

ಆ) ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿಗಾಗಿ ಸ್ವೀಕರಿಸಿರುವ ಹಾಗೂ ಮಂಜೂರಾತಿ ನೀಡಿರುವ ಪ್ರಸ್ತಾವನೆಗಳೆಷ್ಟು; ಅವು ಯಾವುವು; ಯಾವಾಗ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು; ಹಾಗೂ ಬಿಡುಗಡೆ ಮಾಡಿರುವ ಹಣವೆಷ್ಟು;

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿಗೆ ಸಂಬಂಧಿಸಿದಂತೆ ನಾಲ್ಕು ಮನವಿಗಳನ್ನು ಸ್ವೀಕರಿಸಲಾಗಿದೆ. ಅವುಗಳೆಂದರೆ:

1. ಮಾಗೋಡು ಗ್ರಾಮದ ಕಂಬದ ರಂಗಸ್ವಾಮಿ ದೇವಾಲಯದ ಬಳಿ ರೂ. 14.50ಲಕ್ಷಗಳ ಅಂದಾಜಿನಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸುವುದು.
2. ತಾವರೆಕೆರೆಯ ರಂಗನಾಥಸ್ವಾಮಿ ಧಾರ್ಮಿಕ ಕ್ಷೇತ್ರದಲ್ಲಿ ರೂ. 14.50ಲಕ್ಷಗಳ ಅಂದಾಜಿನಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸುವುದು.
3. ಗಿಡಗನಹಳ್ಳಿ ಶ್ರೀರಂಗ ಧಾರ್ಮಿಕ ಕ್ಷೇತ್ರದ ಬಳಿ ಪ್ರವಾಸಿಗರಿಗೆ ಡಾರ್ಮಿಟರಿ ವಸತಿ ನಿರ್ಮಾಣ ಮಾಡುವುದು.
4. ಮೂಗನಹಳ್ಳಿ ಗ್ರಾಮದ ಶ್ರೀ ಅಮ್ಮಾಜಮ್ಮ ಧಾರ್ಮಿಕ ಕ್ಷೇತ್ರದ ಬಳಿ ಪ್ರವಾಸಿಗರಿಗೆ ಡಾರ್ಮಿಟರಿ ವಸತಿ ನಿರ್ಮಾಣ ಮಾಡುವುದು.

ಇ) ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಪ್ರವಾಸಿ ಸ್ಥಳಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ಒದಗಿಸುವಂತೆ ಕೋರಿ ಬಂದಿರುವ ಹಾಗೂ ಮಂಜೂರಾತಿ ನೀಡಿರುವ ಪ್ರಸ್ತಾವನೆಗಳೆಷ್ಟು; ಅವು ಯಾವುವು;

ಪಟ್ಟನಾಯಕನಹಳ್ಳಿಯಲ್ಲಿ ರೂ. 12.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ನಿರ್ಮಿಸಿ ಪ್ರವಾಸಿಗರಿಗೆ ತೆರೆಯಲಾಗಿದೆ.

1. ಮಾಗೋಡು ಗ್ರಾಮದ ಕಂಬದ ರಂಗಸ್ವಾಮಿ ದೇವಾಲಯದ ಬಳಿ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸುವುದು.
2. ತಾವರೆಕೆರೆಯ ರಂಗನಾಥಸ್ವಾಮಿ ಧಾರ್ಮಿಕ ಕ್ಷೇತ್ರದಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸುವುದು.

ಈ) ಮಂಜೂರಾತಿ ನೀಡದಿದ್ದಲ್ಲಿ ಮಂಜೂರಾತಿ ನೀಡಲು ಕ್ರಮಕೈಗೊಳ್ಳಲಾಗುವುದೇ; (ಸಂಪೂರ್ಣ ವಿವರ ನೀಡುವುದು)?

ಅನುದಾನದ ಲಭ್ಯತೆಗನುಸಾರವಾಗಿ ಪರಿಶೀಲಿಸಿ ಡಾರ್ಮಿಟರಿಗಳ ನಿರ್ಮಾಣದ ಬಗ್ಗೆ ಅಗತ್ಯಕ್ರಮ ವಹಿಸಲಾಗುವುದು.

ಕರ್ನಾಟಕ ವಿಧಾನ ಸಭೆ

577 ಶ್ರೀ ಖಾದರ್ ಯು.ಟಿ

ಲೋಕೋಪಯೋಗಿ ಸಚಿವರು

ಅ) ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಲೋಕೋಪಯೋಗಿ ಇಲಾಖಾ ರಸ್ತೆಗಳು ದುಸ್ಥಿತಿಯಲ್ಲಿದ್ದು ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಂಚಾರ ದಟ್ಟಣೆ ಇರುವ ಈ ರಸ್ತೆಗಳನ್ನು ದುರಸ್ತಿಗೊಳಿಸುವ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲಾಗುವುದೇ;

ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯಡಿ 71.96 ಕಿ.ಮೀ ಉದ್ದದ ಒಟ್ಟು 16 ಜಿಲ್ಲಾ ಮುಖ್ಯ ರಸ್ತೆಗಳಿರುತ್ತವೆ. ಇವುಗಳ ಪೈಕಿ ರಾಷ್ಟ್ರೀಯ ಹೆದ್ದಾರಿ–48ನ್ನು ಅಭಿವೃದ್ಧಿಗಾಗಿ ಮುಚ್ಚಿದ್ದರಿಂದ, 5.00 ಕಿ.ಮೀ ಉದ್ದದ ಮಾಣಿ–ಉಳ್ಳಾಲ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಮಳೆ ನಿಂತ ನಂತರ ಈ ರಸ್ತೆಯ ನಿರ್ವಹಣೆ ಕೈಗೊಂಡು ವಾಹನ ಸಂಚಾರಕ್ಕೆ ಯೋಗ್ಯಗೊಳೀಸಲಾಗುವುದು. ಉಳಿದ 66.96 ಕಿ.ಮೀ ಉದ್ದದ ಇತರ ರಸ್ತೆಗಳ ನಿರ್ವಹಣೆಯನ್ನು ಕೈಗೊಂಡು ವಾಹನ ಸಂಚಾರಕ್ಕೆ ಯೋಗ್ಯವಾಗಿ ಇಡಲಾಗಿರುತ್ತದೆ.

ಕ್ಷೇತ್ರದಲ್ಲಿರುವ ಎಲ್ಲಾ ರಸ್ತೆಗಳನ್ನು ಲಭ್ಯ ಅನುದಾನದಲ್ಲಿ ದುರಸ್ತಿಗೊಳಿಸಿ ಸುಗಮ ಸ್ಥಿತಿಯಲ್ಲಿಡಲಾಗುತ್ತಿದೆ.

ಕರ್ನಾಟಕ ವಿಧಾನ ಸಭೆ

579 ಶ್ರೀ ಖಾದರ್ ಯು.ಟಿ

ಮಾನ್ಯ ಗೃಹ ಸಚಿವರು

ಅ) ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಲ್ಲಾ ಸಮುದಾಯದ ಯುವಕರ ಮೇಲೆ ಕ್ಷುಲಕ ಕಾರಣಗಳಿಗಾಗಿ ಪ್ರಕರಣಗಳನ್ನು (cases) ದಾಖಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಂತಹ ಪ್ರಕರಣಗಳು ದಾಖಲಾಗಿರುವುದಿಲ್ಲ.